# ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ: ಖಾದಿ ಮತ್ತು ಕೈಮಗ್ಗದ ಬಟ್ಟೆಯನ್ನು ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಖರೀದಿ ಮಾಡುವ ಬಗ್ಗೆ.

---

Office of the Deputy Commissioner Mysore District, Mysore
24 MAR 1986

24/3/86

174
1-4-86

ACT I

ಪೀಠಿಕೆ:

ಖಾದಿ ವಿಭಾಗವು, ಈಚಿನ ಕೆಲವು ವರ್ಷಗಳಲ್ಲಿ ಕೈಮಗ್ಗ ವಿಭಾಗಕ್ಕೆ ವ್ಯಾಪಕವಾಗಿ ಉತ್ತೇಜನ ಹಾಗೂ ಸೌಲಭ್ಯಗಳನ್ನು ಕೊಟ್ಟಾಗ್ಯೂ ಗಣನೀಯ ಪ್ರಮಾಣದಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುತ್ತಿದೆ. ಖಾದಿ ವಿಭಾಗವು ತನ್ನ ಚಟುವಟಿಕೆಗಳನ್ನು ಉಣ್ಣೆ ಮತ್ತು ರೇಷ್ಮೆ ವಿಭಾಗಗಳಿಗೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ಹರಡಿದೆ.

2. ರಾಜ್ಯ ಸರ್ಕಾರವು ಖಾದಿ ಬಟ್ಟೆಯನ್ನು ಆಸ್ಪತ್ರೆ, ಶಾಲಾ ಸಮವಸ್ತ್ರ, ನಾಲ್ಕನೇ ದರ್ಜೆ ಸರ್ಕಾರಿ ನೌಕರರ ಸಮವಸ್ತ್ರ (ಪೋಲೀಸ್ ಮತ್ತು ಇತರ ಸಂಬಂಧಪಟ್ಟ ಸೇವೆಗಳನ್ನು ಬಿಟ್ಟು) ಇತ್ಯಾದಿ, ಸರ್ಕಾರಿ ಇಲಾಖೆಗಳ ಉಪಯೋಗಕ್ಕಾಗಿ ಖರೀದಿಸುತ್ತಿತ್ತು. ಸರ್ಕಾರವು ಅನೇಕ ಸುತ್ತೋಲೆಗಳ ಮೂಲಕ ಸರ್ಕಾರಿ ಇಲಾಖೆಗಳು ಖಾದಿಯನ್ನು ಉಪಯೋಗಿಸಬೇಕೆಂದು ಸರ್ಕಾರಿ ಇಲಾಖೆಗಳಿಗೆ ತಿಳುವಳಿಕೆ ನೀಡಿತ್ತು. ಖಾದಿ ಉತ್ಪಾದನೆಗೆ ಉತ್ತೇಜನ ಕೊಡುವುದು ಮತ್ತು ಖಾದಿ ಮಾರಾಟದಲ್ಲಿ ಸಹಾಯ ನೀಡುವುದು ಸರ್ಕಾರದ ನೀತಿಯಾಗಿತ್ತು.

3. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಸ್ಥಾಪನೆಯಾದ ನಂತರ ಬೆಳವಣಿಗೆಯ ಕಡೆಗೆ ಲಕ್ಷ್ಯ ಹರಿಸುವುದು ಸರ್ಕಾರಕ್ಕೆ ಅಗತ್ಯವಾಯಿತು. ಮತ್ತು 1977ನೇ ಸಾಲಿನಿಂದ ಕೈಮಗ್ಗ ಬಟ್ಟೆಯ ಮಾರಾಟಕ್ಕಾಗಿ ಸಹಾಯ ಕಲ್ಪಿಸಿಕೊಡುವುದು ಸಹ ಅವಶ್ಯವಾಯಿತು. ಇದರಿಂದಾಗಿ ಖಾದಿ ವಿಭಾಗಕ್ಕೆ ಕೊಡಲಾಗುತ್ತಿದ್ದ ಮಾರಾಟ ಸೌಲಭ್ಯ ದಿನೇ ದಿನೇ ಕ್ಷೀಣಿಸಿ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಖಾದಿಯನ್ನು ಖರೀದಿಸುವುದು ಬಹಳ ಕಮ್ಮಿಯಾಯಿತು. ಇದರಿಂದಾಗಿ ಬಹಳಷ್ಟು ಖಾದಿ ಬಟ್ಟೆಯು ದಾಸ್ತಾನಾಯಿತು. ಈ ದಾಸ್ತಾನನ್ನು ಕರಗಿಸುವ ಸಲುವಾಗಿ ರಾಜ್ಯ ಸರ್ಕಾರವು 1983-84ರಲ್ಲಿ ಚಿಲ್ಲರೆ ಖಾದಿ ಮಾರಾಟದ ಮೇಲೆ ಶೇ.20 ರಷ್ಟು ರಿಯಾಯಿತಿ ಕೊಟ್ಟಿತು. ಈ ರಿಯಾಯಿತಿಯನ್ನು 1984-85 ಮತ್ತು 1985-86 (ಕೆಲವು ತಿದ್ದುಪಡಿಗಳೊಂದಿಗೆ) ರಲ್ಲಿ ಸಹ ಮುಂದುವರಿಸಲಾಯಿತು.

4. ಖಾದಿ ಬಟ್ಟೆಯ ಚಿಲ್ಲರೆ ಮಾರಾಟದ ಮೇಲೆ ಸರ್ಕಾರವು ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಪ್ರತಿ ವರ್ಷ ಕೊಡುತ್ತಿದೆ. ರಿಯಾಯಿತಿ ಭಾರವು ವರ್ಷೇ ವರ್ಷೇ ಹೆಚ್ಚುತ್ತಿದ್ದು ಖಾದಿ ವಿಭಾಗವು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಿಕೊಂಡು ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ ರಿಯಾಯಿತಿ ರೂಪದಲ್ಲಿ ಮಾರಾಟ ಸಹಾಯವನ್ನು ಮುಂದುವರಿಸುವುದು ಸರ್ಕಾರಕ್ಕೆ ಅನಿವಾರ್ಯವಾಗಿದೆ.

5. 1984ರಲ್ಲಿ ಸರ್ಕಾರವು, ಸರ್ಕಾರಿ ಇಲಾಖೆಗಳು ಖಾದಿಯನ್ನು ಕಡ್ಡಾಯವಾಗಿ ಕೊಂಡುಕೊಳ್ಳುವ ಪ್ರಶ್ನೆಯನ್ನು ಸಂಬಂಧಪಟ್ಟ ಇಲಾಖೆಗಳೊಡನೆ ಸಮಾಲೋಚಿಸಿತು. ಆದರೆ ಖಾದಿ ಬಟ್ಟೆಯು ಸಾಕಷ್ಟು ಬಾಳಿಕೆ ಕೊಡುವುದಿಲ್ಲವೆಂದು ಮತ್ತು ಅದರ ಬಳಕೆಯಲ್ಲಿ ಖರ್ಚು ಜಾಸ್ತಿಯಾಗುವುದರಿಂದ ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು ಖಾದಿ ಬಳಕೆಗೆ ಪುನರಾವರ್ತಿಸಲು ಒಪ್ಪಲಿಲ್ಲ. ಆದ್ದರಿಂದ ಖಾದಿ ಬಟ್ಟೆಯ ಬಳಕೆಯನ್ನು ಇಲಾಖೆಗಳ ಮೇಲೆ ಕಡ್ಡಾಯವಾಗಿ ಹೇರುವುದು ಅಷ್ಟು ಸಮಂಜಸವಲ್ಲವೆಂದು ಮತ್ತು ಖಾದಿ ಮಾರಾಟದ ಮೇಲೆ ಉದಾರವಾಗಿ ರಿಯಾಯಿತಿಯನ್ನು ಕೊಡಬೇಕೆಂದೂ ತೀರ್ಮಾನಿಸಲಾಯಿತು.

6. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ರಾಜ್ಯದ ಬಿಜಾಪುರ, ಚಿತ್ರದುರ್ಗ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ವಿಶೇಷ ಕಾರ್ಯಕ್ರಮವನ್ನು ಕೈಗೊಂಡಿದೆ. ಇದರಿಂದಾಗಿ ಖಾದಿ ಉತ್ಪಾದನೆ ಸ್ವಾಭಾವಿಕವಾಗಿ ಹೆಚ್ಚುವುದು. ಆದ್ದರಿಂದ ರಿಯಾಯಿತಿಯಲ್ಲದೆ ಇತರ ಮಾರಾಟ ಸೌಲಭ್ಯಗಳನ್ನು ಖಾದಿ ಬಟ್ಟೆಗೆ ಕಲ್ಪಿಸಿಕೊಡುವುದು ಯೋಗ್ಯವಾಗಿದೆ. ಈಗ ಖಾದಿ ಬಟ್ಟೆಯ ಗುಣಮಟ್ಟವು ಸಾಕಷ್ಟು ಹೆಚ್ಚಿದೆ. ಮತ್ತು ಖಾದಿ ವಿಭಾಗದಲ್ಲಿ ಕೈಮಗ್ಗದ ಬಟ್ಟೆಯಷ್ಟೇ ಗುಣಮಟ್ಟವುಳ್ಳ ಟವೆಲ್‌ಗಳು, ದೋತರಗಳು, ಸೀರೆಗಳು, ಬೆಡ್‌ಷೀಟ್‌ಗಳು, ಷರ್ಟಿಂಗ್‌ಗಳು, ದಿಂಬು ಹೊದಿಕೆಗಳು, ಸೂಟಿಂಗ್‌ಗಳು ಮತ್ತು ಅಲಂಕಾರಿಕ ಬಟ್ಟೆಗಳು ಸಹ ತಯಾರಾಗುತ್ತವೆ. ಕೈಮಗ್ಗ ವಿಭಾಗದಲ್ಲಿ ಸಾಕಷ್ಟು ಸುವ್ಯವಸ್ಥಿತವಾದ ಮಾರಾಟದ ವ್ಯವಸ್ಥೆ ಇದೆ. ಅದಲ್ಲದೆ ಕೈಮಗ್ಗದ ಬಟ್ಟೆಯನ್ನು ಈಗ ಸೀರೆ ಪಂಚೆ ಯೋಜನೆ ಮತ್ತು ಶಾಲಾ

. . . . . . 2.

ಸಮವಸ್ತ್ರ ಯೋಜನೆಗಳಿಗೆ ಬಹಳಷ್ಟು ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ಆದ್ದರಿಂದ ಖಾದಿ ಬಟ್ಟೆಯ ಕೆಲವೊಂದು ನಮೂನೆಗಳನ್ನು ಕಡ್ಡಾಯವಾಗಿ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಖರೀದಿ ಮಾಡಬೇಕೆಂದು ನಿರ್ದೇಶಿಸುವುದು ಅಗತ್ಯವಾಗಿದೆ.

7. ಖಾದಿಯಂತೆಯೇ ಕೈಮಗ್ಗದ ಬಟ್ಟೆಯ ಮೇಲೆ ರಿಯಾಯಿತಿ ನೀಡಲಾಗುತ್ತಿದೆ. ಈ ಎರಡೂ ವಿಭಾಗದ ಉತ್ಪಾದನೆಗೆ ಖಚಿತವಾದ ಮಾರಾಟ ಸೌಲಭ್ಯವನ್ನು ಒದಗಿಸಿಕೊಡುವುದು ಅವಶ್ಯವಿದ್ದುದರಿಂದ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಈ ಎರಡೂ ತರಹದ ಬಟ್ಟೆಗಳನ್ನು ಕೊಂಡುಕೊಳ್ಳುವಂತೆ ಮಾರ್ಗದರ್ಶನ ನೀಡುವುದು ಈಗ ಅಗತ್ಯವಾಗಿದೆ.

ಆದೇಶ ಸಂಖ್ಯೆ: ಸಿಐ 126 ಸಿಟಿಹೆಚ್ 85, ಬೆಂಗಳೂರು, ದಿನಾಂಕ 4ನೇ ಮಾರ್ಚ್ 1986.

ಈ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಇಲಾಖೆಗಳು ಇನ್ನು ಮುಂದೆ ತಮಗೆ ಅವಶ್ಯಕವಿರುವ ಬಟ್ಟೆಗಳನ್ನು ಕೈಮಗ್ಗ ಅಥವಾ ಖಾದಿ ಸಂಸ್ಥೆಗಳಿಂದಲೇ ಕೊಳ್ಳಬೇಕೆಂದು ಸರ್ಕಾರ ಈ ಮೂಲಕ ಆದೇಶಗಳನ್ನು ನೀಡುತ್ತದೆ.

2. ಆಸ್ಪತ್ರೆಗಳು, ಶುಶ್ರೂಷಾಲಯಗಳು, ಇತ್ಯಾದಿಗಳಲ್ಲಿ ಉಪಯೋಗಕ್ಕಾಗಿ ಬೇಕಾಗುವ ಎಲ್ಲಾ ತರಹದ ಬಟ್ಟೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಖಾದಿ ವಿಭಾಗದಿಂದಲೇ ಪಡೆಯಬೇಕು. ಸರ್ಕಾರಿ ನಿವಾಸಗಳಲ್ಲಿ ಬಾಗಿಲು, ಕಿಟಕಿ ಇತ್ಯಾದಿಗಳಿಗೆ ಬೇಕಾಗುವ ಹಾಗೂ ಸೋಫಾಸೆಟ್‌ಗಳಿಗೆ ಮೇಲೆ ಹೊದಿಸುವ ಅಲಂಕಾರಿಕ ಬಟ್ಟೆಯನ್ನು ಲೋಕೋಪಯೋಗಿ ಇಲಾಖೆಯು ಕೈಮಗ್ಗ, ಖಾದಿ ಅಥವಾ ರೇಷ್ಮೆ ವಿಭಾಗದಿಂದ ಸಂದರ್ಭಕ್ಕೆ ಅನುಗುಣವಾಗಿ ಉಪಯೋಗಿಸಬೇಕು. ಸಮಾಜ ಕಲ್ಯಾಣ, ಶಿಕ್ಷಣ ಮತ್ತು ಇತರೆ ಇಲಾಖೆಗಳು ತಮಗೆ ಬೇಕಾಗುವ ಬಟ್ಟೆಯನ್ನು ಕೈಮಗ್ಗ ಮತ್ತು ಖಾದಿ ಬಟ್ಟೆಗಳಿಗೆ ಮಿತಿಗೊಳಿಸಬೇಕು.

3. ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಮತ್ತು ಸರ್ಕಾರಿ ಕಂಪೆನಿಗಳು ಸಹ ತಮಗೆ ಬೇಕಾಗುವ ವಸ್ತ್ರವನ್ನು ಇದೇ ರೀತಿ ಖಾದಿ ಮತ್ತು ಕೈಮಗ್ಗದ ಬಟ್ಟೆಯನ್ನು ಕಡ್ಡಾಯವಾಗಿ ಖರೀದಿಸಬೇಕು. ಈ ಆದೇಶಗಳನ್ನು ಉಲ್ಲಂಘಿಸಬಾರದು. ಉಲ್ಲಂಘಿಸಿದಲ್ಲಿ ಖರೀದಿ ಅಧಿಕಾರಿಗಳ ಮೇಲೆ ವೈಯುಕ್ತಿಕವಾಗಿ ಜವಾಬ್ದಾರಿ ಹೊರಿಸಲಾಗುವುದು. ಸರ್ಕಾರಿ ಇಲಾಖೆಗಳಲ್ಲಿ ಮತ್ತು ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಮವಸ್ತ್ರಗಳಿಗಾಗಿ ಬಟ್ಟೆಗಳನ್ನು ಕೊಳ್ಳುವುದರಲ್ಲಿ ಈ ಆದೇಶ ಅನ್ವಯಿಸುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್.ವಿ.ನಾಯಕ್) 6/3/86
ಉಪ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

ಗೆ.

ಎಲ್ಲಾ ಸರ್ಕಾರದ ಕಾರ್ಯದರ್ಶಿಗಳು, (ಪತ್ರದೊಂದಿಗೆ)
ಎಲ್ಲಾ ವಿಭಾಗಾಧಿಕಾರಿಗಳು,
ಎಲ್ಲಾ ಜಿಲ್ಲಾಧಿಕಾರಿಗಳು,
ಎಲ್ಲಾ ಇಲಾಖಾ ಮುಖ್ಯಸ್ಥರು,
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಖಾದಿ ಮತ್ತು
ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು.
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಬೆಂಗಳೂರು.
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು.
ಮುಖ್ಯ ಲೆಕ್ಕಪಾಲಕರು, ಕರ್ನಾಟಕ, ಬೆಂಗಳೂರು.